ಅದನ್ನೆಲ್ಲ ತಿಳಿದುಕೊಂಡು ಸೈನಿಕ ಕೇಳಿದ: 'ಅದು ಸರಿ ಮಂತ್ರವಾದಿನಿ ಅಜ್ಜಿ, ಇದರಿಂದ ನಿನಗಾಗುವ ಲಾಭವೇನು? ಹೇಳು ನಾನು ತರುವ ನಾಣ್ಯಗಳಲ್ಲಿ ಅರ್ಧಭಾಗವೇ?' ಅದಕ್ಕೆ ಮಂತ್ರವಾದಿನಿ ಹೇಳಿದಳು, 'ನನಗೆ ನೀನು ತರುವ ನಾಣ್ಯಗಳಲ್ಲಿ ಒಂದು ಬಿಡಿಗಾಸು ಬೇಡ. ಆದರೆ ನಾನು ಕೇಳುವುದಿಷ್ಟೇ ನೀನು ನಿನಗೆ ಬೇಕಷ್ಟು ನಾಣ್ಯ ಸಂಗ್ರಹಿಸಿಕೊಂಡು ಬರುವಾಗ, ಅಲ್ಲಿ ಈ ಹಿಂದೆ ನನ್ನ ಅಜ್ಜಿ ಮರೆತು ಬಿಟ್ಟು ಬಂದ ಒಂದು ಹಳೇ ಪೆಟ್ಟಿಗೆ ಇದೆ. ಅದೊಂದು ಮರೆಯದೆ ತಂದು ಕೊಟ್ಟರೆ ಸಾಕು' ಎಂದಳು. ಅದಕ್ಕೆ ಸೈನಿಕ 'ಒಳ್ಳೆಯದು ಆಗಬಹುದು. ಕಟ್ಟು ನಿನ್ನ ಹಗ್ಗವನ್ನು ನನ್ನ ಸೊಂಟಕ್ಕೆ. ನಾನು ಮರದ ಬುಡಕ್ಕೆ ಇಳಿಯುತ್ತೇನೆ' ಎಂದನು.

'ಇದೋ ಇಲ್ಲಿದೆ ಹಗ್ಗ ಮತ್ತು ನನ್ನ ನೀಲಿ ಬಣ್ಣದ ಚೌಕಾಕಾರದ ಚಿತ್ರವಿರುವ ಮೇಲಂಗಿ' ಎಂದು ಮಾಯಾವಿನಿ ಹೇಳಿ, ಯೋಧನ ಸೊಂಟಕ್ಕೆ ಹಗ್ಗವನ್ನು ಕಟ್ಟಿ ಅವನಿಗೆ ತನ್ನ ಮೇಲಂಗಿಯನ್ನು ಕೊಟ್ಟಳು. ಸೈನಿಕನು ಮರವನ್ನು ಹತ್ತಿ ಆ ಮರದ ಪೊಟರೆಯ ಒಳಗಿನಿಂದ ಇಳಿದು ನೂರು ದೀಪಗಳ ಬೆಳಕಿರುವ ತಳ ಇರುವ ಅಂಗಣವನ್ನು ಸೇರಿದನು. ಅಲ್ಲಿ ಮಂತ್ರವಾದಿನಿ ಹೇಳಿದಂತೆ ಮೂರು ಬಾಗಿಲುಗಳಿದ್ದವು. ಮೊದಲನೆಯ ಬಾಗಿಲನ್ನು ಸೈನಿಕ ತೆರೆದ. ಅಲ್ಲಿ ಒಂದು ನಾಯಿ ಕುಳಿತಿತ್ತು. ಅದು ಸೈನಿಕನನ್ನು ದುರುಗುಟ್ಟಿ ನೋಡುತ್ತಿತ್ತು. ಅದರ ಕಣ್ಣು ಒಂದು ಹರಿವಾಣದಷ್ಟು ಅಗಲವಿತ್ತು. ಆದರೆ, ಸೈನಿಕ ಹೆದರಲಿಲ್ಲ; ಅವನ ಕೈಯಲ್ಲಿ ಮಂತ್ರವಾದಿನಿಯ ಮೇಲಂಗಿ ಇತ್ತು. ನಾಯಿಯನ್ನು ಎತ್ತಿ ಮಂತ್ರವಾದಿನಿಯ ಮೇಲಂಗಿಯ ಮೇಲೆ ಕುಳ್ಳಿರಿಸಿ ತಿಜೋರಿಯ ಬಾಗಿಲು ತೆರೆದು, ತನಗೆ ಸಾಧ್ಯವಾದಷ್ಟು ತಾಮ್ರದ ನಾಣ್ಯಗಳನ್ನು ತುಂಬಿಸಿಕೊಂಡನು. ತಿಜೋರಿಯ ಬಾಗಿಲನ್ನು ಮುಚ್ಚಿ ನಾಯಿಯನ್ನು ಪುನಃ ಅದರ ಮೇಲೆ ಕುಳ್ಳಿರಿಸಿ, ನೀಲಿ ಮೇಲಂಗಿಯನ್ನು ತೆಗೆದುಕೊಂಡು ಎರಡನೆ ಕೋಣೆಗೆ ಬಂದನು.

ಎರಡನೇ ಕೋಣೆಯ ಬಾಗಿಲು ತೆರೆದರೆ, ಅಲ್ಲಿಯೂ ಒಂದು ನಾಯಿ ಕುಳಿತಿದೆ. ಅದರ ಕಣ್ಣು ಒಂದು ಹಿಟ್ಟಿನ ಗಿರಣಿಯ ಗಾಲಿಯಷ್ಟು ದೊಡ್ಡದು. ಅದು ಭಯಂಕರವಾಗಿ ಕಾಣುತ್ತಿತ್ತು. ಆದರೆ, ಸೈನಿಕ ನಾಯಿಯ ಆಕಾರಕ್ಕಾಗಲೀ ಅದರ ದೃಷ್ಟಿಗಾಗಲೀ ಹೆದರಲಿಲ್ಲ; ಬದಲಾಗಿ, ಮಂತ್ರವಾದಿನಿಯ ನಿಲುವಂಗಿಯನ್ನು ಹಾಸಿ ನಾಯಿಯನ್ನು ಎತ್ತಿ ಅದರ ಮೇಲೆ ಕುಳ್ಳಿರಿಸಿದನು. ಮತ್ತು ತಿಜೋರಿಯ ಬಾಗಿಲು ತೆರೆದನು. ಅಲ್ಲಿ ನೋಡಿದರೆ, ತಿಜೋರಿ ತುಂಬಾ ಬೆಳ್ಳಿಯ ನಾಣ್ಯಗಳು ತುಂಬಿದ್ದವು. ಸೈನಿಕ ತಡ ಮಾಡಲಿಲ್ಲ. ತಾನು ಆ ಮೊದಲೇ ಶೇಖರಿಸಿದ್ದ ತಾಮ್ರದ ನಾಣ್ಯಗಳೆಲ್ಲ ಎಸೆದು ಅದರ ಬದಲಾಗಿ ಬೆಳ್ಳಿಯ ನಾಣ್ಯಗಳಿಂದ ತುಂಬಿಕೊಂಡನು. ತೃಪ್ತಿಯಾಗುವಷ್ಟು ನಾಣ್ಯಗಳನು ತುಂಬಿಕೊಂಡ, ನಂತರ ನಾಯಿಯನ್ನು ಎತ್ತಿ ತಿಜೋರಿಯ ಮೇಲೆ ಪುನಃ ಕುಳ್ಳಿರಿಸಿ ನೀಲಿ ಮೇಲಂಗಿಯನ್ನು ತೆಗೆದುಕೊಂಡು ಮೂರನೇ ಬಾಗಿಲಿಗೆ ಬಂದನು.

ಮೂರನೇ ಬಾಗಿಲನ್ನು ತೆರೆದು ನೋಡಿದರೆ, ಅಲ್ಲಿಯೂ ಒಂದು ಭಯಂಕರ ಆಕೃತಿಯ ನಾಯಿ ಕುಳಿತಿರುವುದನ್ನು ನೋಡಿದನು. ಅದರ ಕಣ್ಣೋ ಒಂದು ಗೋಪುರದಷ್ಟು ಅಗಲವಾಗಿತ್ತು. ಆದರೆ, ಸೈನಿಕನೇನು ಹೆದರಲಿಲ್ಲ. ಅವನು ಆಗಲೇ ಅನುಭವಿಯಾಗಿದ್ದ. ಮೊದಲಿಗೇನೋ ಅದರ ಆಕೃತಿಗೆ ಭಯವಾದರೂ ಸೈನಿಕನಾದುದರಿಂದ ಧೈರ್ಯ ತೆಗೆದುಕೊಂಡು ತನ್ನ ನೀಲಿ ನಿಲುವಂಗಿಯನ್ನು ನೆಲದ ಮೇಲೆ ಹಾಸಿ ನಾಯಿಯನ್ನು ಎತ್ತಿ ಅದರ ಮೇಲೆ ಕುಳ್ಳಿರಿಸಿದನು. ಮೂರನೇ ತಿಜೋರಿಯ ಬಾಗಿಲನ್ನು ಸೈನಿಕ ತೆರೆದರೆ ಅವನಿಗೆ ಸಖೇದಾಶ್ಚರ್ಯವಾಗೋಯ್ತು. ಅಲ್ಲಿ ನೋಡುತ್ತಾನೆ ತಿಜೋರಿ ತುಂಬಾ ಬಂಗಾರದ